**<u>ದಿನಾಂಕಃ 16-10-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>**

**<u>ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಎನ್ ಡಿ ವಕೀಲರಿಂದಃ</u>**

ನಾನು 8 ನೇ ತರಗತಿಯವರೆಗೆ ಒದಿರುತ್ತೇನೆ. ನನಗೆ 61 ವರ್ಷ ವಯಸ್ಸು ಆಗಿತ್ತು. ನಾನು ಕೃಷಿಯಿಂದ ಮತ್ತು ಕೂಲಿ ಕೆಲಸ ಮಾಡುತ್ತಿದ್ದೇನೆ. ಈಗ ಮಾಡುತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಕೃಷಿಯಿಂದ ಮತ್ತು ಕೂಲಿ ಕೆಲಸ ಮಾಡಿ ತಿಂಗಳಿಗೆ 35,000/- ರೂ. ದುಡಿಯುತ್ತಿದ್ದೇನೆ ಎಂದು ತೋರಿಸಲು ನಾನು ಯಾವುದೇ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ದಿನಾಂಕ 26.08.2020 ರಂದು ಒಮಿನಿ ಗಾಡಿಯನ್ನು ಬಾಡಿಗೆಗೆ ತೆಗೆದುಕೊಂಡು ಹೋಗಿದ್ದೇನು ಎಂದರೆ ಸರಿ. ನಾನು ಸದರಿ ವಾಹನವನ್ನು ತೆಗೆದುಕೊಂಡು ಕನ್ನೆ ನೋಡಲು ಹೋಗಿದ್ದೇವು. ನಾನು , ಲಲಿತಮ್ಮ , ಧ್ರಾಕ್ಷಾಯಣಮ್ಮ ಸಂಬಂಧಿಕರು. ಸದರಿ ಗಾಡಿಯನ್ನು ಮಂಜುನಾಥ ಎನ್ನುವವರು ಚಲಾಯಿಸುತ್ತಿದ್ದರು. ಮಂಜುನಾಥ ನನಗೆ ಸಂಬಂಧಿಕರಲ್ಲ. ಸದರಿಯವರನ್ನು ರುದ್ರೇಶ ಎಂದು ಕರೆಯುತ್ತಿದ್ದರು ಎಂದು ಸಾಕ್ಷಿಯೂ ಸ್ವ ಇಚ್ಚೆಯಿಂದ ಕರೆಯುತ್ತಿದ್ದರು. ಸದರಿ ಮಂಜುನಾಥನನ್ನು ರುದ್ರೇಶ ಎಂದು ಕರೆಯುತ್ತಿದ್ದರು ಎಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಸದರಿ ವಾಹನದಲ್ಲಿ ಅಪಘಾತವಾದ ದಿನ ನಾನು, ಲಲಿತಮ್ಮ , ಧ್ರಾಕ್ಷಾಯಣಮ್ಮ, ಇನ್ನೊಬ್ಬರು ಲಲಿತಮ್ಮ ಹೋಗುತ್ತಿದ್ದೇವು. ಸದರಿ ವಾಹನವು ಗೋವಿಂದಪುರದ ಹತ್ತಿರ ಅಪಘಾತವಾಗಿರುತ್ತದೆ. ಅಪಘಾತವಾದ ನಂತರ ಆ ವಾಹನವು ಚರಂಡಿಯಲ್ಲಿ ಪಲ್ಟಿಯಾಗಿತ್ತು. ಪೋಲಿಸರು ನನ್ನನ್ನು ಠಾಣೆಗೆ ಕರೆದಿರುವುದಿಲ್ಲ. ಪೋಲಿಸರು ಅಪಘಾತಕ್ಕೆ ಸಂಬಂದಪಟ್ಟಂತೆ ನನ್ನ ಹೇಳಿಕೆಯನ್ನು ನಮ್ಮ ಊರಿಗೆ ಬಂದು ಪಡೆದುಕೊಂಡಿರುತ್ತಾರೆ. ಪೋಲಿಸರಿಗೆ ಅಪಘಾತವಾದ ಬಗ್ಗೆ ಹೇಳಿರುತ್ತೇನೆ. ಅಪಘಾತವಾದ ನಂತರ ಕಾರು ಹೊಲದಲ್ಲಿ ಹೋಗಿ ನಿಂತಿತ್ತು ಎಂದರೆ ಸರಿಯಲ್ಲ. ವಾಹನದಲ್ಲಿ ಧ್ರಾಕ್ಷಾಯಣಮ್ಮ , ಇಬ್ಬರೂ ಲಲಿತಮ್ಮ ಹಿಂದಿನ ಸೀಟಿನಲ್ಲಿ ಕುಳಿತ್ತಿದ್ದರು. ನನಗೆ ಅಪಘಾತದಿಂದಾಗಿ ಬಲಗಾಲು , ಮಲಮುಂಗೈಗೆ ಗಾಯವಾಗಿತ್ತು. ಗಾಯವಾದ ನಂತರ ಶಿವಮೊಗ್ಗದ ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತೇವೆ. ಅಪಘಾತವಾದ ನಂತರ ಮೊದಲು ಹೊನ್ನಾಳಿ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಇಬ್ಬರು ಲಲಿತಮ್ಮ ರವರಿಗೆ ಬಲಭಾಗದಲ್ಲಿ ಪೆಟ್ಟಾಗಿರುತ್ತದೆ. ನನಗೆ ಬಲ ಮಂಡಿಯ ಕೆಳಗೆ ಮೂಳೆ ಮುರಿತವಾಗಿರುತ್ತದೆ. ಉಳಿದ ಲಲಿತಮ್ಮ ಇಬ್ಬರು ನಾನು ಒಂದೇ ಊರಿನವರು. ನಾವೇಲ್ಲರೂ ಒಂದೇ ಆಸ್ಪತ್ರೆಯಲ್ಲಿ ಅಕ್ಕಪಕ್ಕದಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತೇವೆ. ನಾನು ಉಳಿದವರಿಗೆ ಎಲ್ಲೆಲ್ಲಿ ಗಾಯಗಳಾಗಿರುತ್ತವೆ ಎಂದು

ತಿಳಿದುಕೊಂಡಿರುವುದಿಲ್ಲ. ನಾನು ಮೆಗ್ಗಾನ ಆಸ್ಪತ್ರೆಯಲ್ಲಿ 15 ದಿವಸ ದಾಖಲಾಗಿದ್ದೇನೆ. ಆ ಬಗ್ಗೆ ನಾನು ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. 15 ದಿನಗಳಲ್ಲಿ ನಾನು ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡಿರುತ್ತೇನೆ. ನನಗೆ ಎಕ್ಸರೆ ತೆಗೆದಿರುತ್ತಾರೆ. ನನಗೆ ಚಿಕಿತ್ಸೆ ಕೊಟ್ಟ ವೈಧ್ಯರ ಹೆಸರು ನನಗೆ ಗೊತ್ತಿಲ್ಲ. ನಾನು ಒಂದು ತಿಂಗಳು ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದು 80 ಸಾವಿರ ರೂ, ಖರ್ಚು ಮಾಡಿದ್ದೇನೆ ಎಂದು ಹೇಳಿದ್ದು ಆ ಬಗ್ಗೆ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನನಗೆ ಮುಂದುವರೆದ ಚಿಕಿತ್ಸೆ 40 ಸಾವಿರ ರೂ. ಬೇಕು ಎಂದು ತೋರಿಸಲು ಆ ಬಗ್ಗೆ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನನಗೆ ಚಿಕಿತ್ಸೆ ಕೊಟ್ಟ ವೈಧ್ಯರಿಂದ ಅಂಗನ್ಯೂನತೆ ಪ್ರಮಾಣ ಪತ್ರವನ್ನು ಕೊಡಿ ಎಂದು ಕೇಳಲು ತೊಂದರೆ ಇತ್ತೇ ಎಂದರೆ ಇರಲಿಲ್ಲ. ಮೆಗ್ಗಾನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ನಂತರ ಎಸ್ ಎಸ್ ಐ ಆಸ್ಪತ್ರೆ ದಾವಣಗೆರೆಯಲ್ಲಿ ಒಂದು ವರ್ಷದ ಹಿಂದೆ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. 2020 ರಿಂದ ಎಸ್ ಎಸ್ ಐ ಆಸ್ಪತ್ರೆ ದಾವಣಗೆರೆಯಲ್ಲಿ ಚಿಕಿತ್ಸೆ ಪಡೆಯುವ ಮಧ್ಯದಲ್ಲಿ ಚಿಕಿತ್ಸೆ ಪಡೆದುಕೊಂಡ ಬಗ್ಗೆ ಯಾವುದಾದರೂ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ. ದಾವಣಗೆರೆ ಆಸ್ಪತ್ರೆಗೆ ನಾನು ಸರ್ಟಿಪಿಕೇಟ ಪಡೆಯಲು ಹೋಗಿದ್ದೇನು. ನನಗೆ ಯಾವುದೇ ಗಾಯಗಳು ಆಗದೇ ಇದ್ದರೂ ಸಹ ಮೆಗ್ಗಾನ ಆಸ್ಪತ್ರೆಯವರ ವೈದರೊಂದಿಗೆ ಮಿಲಾಪಿಯಾಗಿ ವೈಧ್ಯರಿಂದ ಸುಳ್ಳು ಗಾಯದ ಪ್ರಮಾಣ ಪತ್ರ ಮತ್ತು ಬಿಡುಗಡೆ ಪ್ರಮಾಣ ಪತ್ರ ಖೊಟ್ಟಿ ತಯಾರಿಸಿಕೊಂಡು ಬಂದು ನ್ಯಾಯಾಲಯಕ್ಕೆ ಹಾಜರುಪಡಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈಗಲೂ ನಾನು ಮೊದಲಿನಂತೆ ಈಗಲೂ ಕೆಲಸ ಮಾಡುತ್ತಿದ್ದರೂ ಸಹ ಯಾವುದೇ ಗಾಯಗಳು ಆಗದೇ ಇದ್ದರೂ ಸಹ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಕಾರಣ 2 ನೇ ಎದುರುದಾರರು ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. 1 ನೇ ಎದುರುದಾರರ ವಾಹನದ ಚಾಲಕನಿಗೆ ಡಿ ಎಲ್ ಇಲ್ಲದೇ ಇರುವುದರಿಂದ ಮತ್ತು ಸದರಿ ವಾಹನದ ದಾಖಲಾತಿಗಳು ಸರಿಯಾಗಿ ಇರದೇ ಇರುವುದರಿಂದ 2 ನೇ ಎದುರುದಾರರು ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಸಹಿ/-

(ಶ್ರೀಮತಿ ಹುಲ್ಲೂರ ಹೇಮಲತಾ ಬಸಪ್ಪ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.